189(2)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂವುಟ 28 ಸಂಚಿಕೆ 124] ಮಂಗಳವಾರ 6—2—45 [6 ಪೈ

ಚಿನ್ನ, ಬೆಳ್ಳಿ, ವಡವೆಗಳು,
ಅಮಶಂಪೆಗೆ ಪಾತ್ರಿ ಗುಣಕಾರಿ
ಡಿ ಸೆಂ ಟಿ ಸೈಡ್
ಮತ್ತು
ಝೂಂಡ ಕಂಪೆನಿಯ ಔಷಧಿಗಳು
ಬೇಕಾದರೆ
ಕಾಂತರಾಜ್ & ಕೋ.
ರವೆ ಬೀದಿ, ಮೈಸೂರು.

ಸ್ವಾರಸ್ಯವಾದ ಸುದ್ದಿಗಳು

ರಷ್ಯವು ಜವರಲ್ ಫ್ರಾಂಕೋವನ್ನು ಕೆಲಸದಿಂದ ವಜಾ ಮಾಡಿ ಎನ್ನುತ್ತಿದೆ.

ಂ ಂ

ರಷ್ಯ, ಜರ್ಮನಿ ಗುಪ್ತಶಾಂತಿ ಮಾಡಿಕೊಂಡಿರುವುದು ನಿಜವಲ್ಲವಂತೆ.

ಂ ಂ

ಜರ್ಮನರ ವಿ—1, ವಿ—2, ವಿ—4 ಹಾರುವ [redacted] ಕೆಲಸ ಮಾಡುತ್ತಿದೆಂದು ಹೇಳಲಾಗಿದೆಯೆ. ವಿ—3 ಹಾರುವ ಬಾಂಬು ಯಾವಾಗ ಮುಖವನ್ನು ತೋರಿಸುವುದು ಎಂಬ ಪ್ರಶ್ನೆಯಾಗಿದೆ.

ಂ ಂ

ವೈಸ್ರಾಯಿ - ದೇಸಾಯಿ ಒಟ್ಟಿಗೆ ಸೇರಿ ಮಾತನಾಡುವುದು ಬಡ್ಜೆಟ್ ಸಷನ್ ಕಾಲದಲ್ಲಿ, ಈಗಲ್ಲವಂತೆ.

ಂ ಂ

ಮುಂಬಯಿನಲ್ಲಿ ಒಬ್ಬ ತರುಣಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸ್ ಆಯಿತೆಂದು, ಇಂಟರ್‌ಸಲ್ಲಿ ಓದುತ್ತಿದ್ದಳು. ಆವಳು ಗುಮಾಸ್ತನ ತಪ್ಪಿತದಿಂದ ಪಾಸಾದಳೆಂದು, ಅವಳಿಗೆ ಡಿಪ್ರಮೋಷನ್ ಆಯಿತು. ಈಗ ಅವಳು ಮುಂಬಯಿ ವಿಶ್ವವಿದ್ಯಾನಿಲಯದ ಮೇಲೆ ದಾವಾ ಮಾಡಿರುವಳು.

ಂ ಂ

ಗಾಂಧಿಯವರು ದ. ಆಫ್ರಿಕದಲ್ಲಿ ಸತ್ಯಾಗ್ರಹ ಪ್ರಾರಂಭಿಸಿದಾಗ ಅಲ್ಲಿ ಕೆಲವರು ನಕ್ಕರು. ಒಬ್ಬ ಪಂಜಾಬಿ ಮೊದಲನೇ ಸತ್ಯಾಗ್ರಹಿಗೆ ತಲೆ ಒಡೆಯುತ್ತೇನೆಂದು ಹೆಸರುಮಾಡಿ, ತಲೆಯ ಮೇಲೆ ಪ್ರಥಮ ಸತ್ಯಾಗ್ರಹಿಗೆ ಬಲವಾದ ಏಟು ಕೊಟ್ಟನು. ಕೊನೆಗೆ ತಾನು ಮಾಡಿದ್ದು ತಪ್ಪೆಂದು ಪಶ್ಚಾತ್ತಾಪಪಟ್ಟನು.

ಂ ಂ

ಬರ್ಮಾ[redacted] ವ್ಯಾಪಾರ ಮಾಡುವವರಲ್ಲಿ ಸ್ತ್ರೀಯರೇ ಹೆಚ್ಚು.

ತ್ರಿಮೂರ್ತಿಗಳ ಸಮ್ಮೇಳನ

ರಷ್ಯಾದಲ್ಲಿ ಸ್ಟಾಲಿನ್—ರೂಸ್ವೆಲ್ಟ್—ಚರ್ಚಿಲ್ಲರ ಭೇಟಿ ಈಗ ನಡೆಯುತ್ತಿದೆಯೆಂದು ತುರ್ಕಿಯಿಂದ ಒಂದ ವಾರ್ತೆ ತಿಳಿಸುತ್ತದೆ.

ಫಿಲಿಪ್ಪೈನ್ ರಾಜಧಾನಿಯಾದ ಮ್ಯಾನಿಲಾ ಮಿತ್ರರ ವಶವಾಯಿತು. ಮಿತ್ರ ಸೇನೆ 3 ಕಡೆಗಳಿಂದ ನಗರದೊಳಕ್ಕೆ ನುಗ್ಗಿತು.

ಬೆಂಗಳೂರು ದಂಡಿನಲ್ಲಿರುವ ಅಡ್ವೋಕೇಟ್ ಶ್ರೀ ಸುಂದರಂರವರ ಮನೆಯಲ್ಲಿ 10 ಸಾವಿರ ಗಾಯಿತ್ರಿ ಹೋಮವನ್ನು ಮಾಡಿಸಿದೆ.

ಬೆಂಗಳೂರು ಸಿಟಿಯಲ್ಲಿ ಕೆಲವು ಬಾಲಕರು ಕಾಂಗ್ರೆಸ್ ಬಾವಟ ಸಮೇತ ಚುನಾವಣೆ ಕಾರ್ಯದಲ್ಲಿದ್ದು ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿ ಅ ನೇಲೆ ಬಿಟ್ಟರು.

ರಷ್ಯನರ ನುಗ್ಗುವಿಕೆಯನ್ನು ನೋಡಿದರೆ ಜರ್ಮನರು ಲಂಡನ್ನಿನತನಕ ಹಿಂದಿರುಗುವರೋ ಎನ್ನಿಸುತ್ತದೆ.

ಇಟಲಿಯಲ್ಲಿ 5 ವರಲ್ಲಿ 4 ಮಂದಿಯು ಇಟಲಿಯಲ್ಲಿ ರಿಪಬ್ಲಿಕ್ ಸರಕಾರವಾಗಬೇಕೆಂದು ಅಪೇಕ್ಷಿಸುವರೆಂದು ರೋಂಪತ್ರಿಕೆಯೊಂದು ಬರೆದಿದೆ.

ಬರ್ಮಾರಸ್ತೆಯು ' ಲಿಡೊ ' ರಸ್ತೆಗೆ ಸ್ವಲ್ಪವೆಲ್ ರಸ್ತೆಯೆಂದು ನಾವು ಕರಣವಾಯಿತು.

ಹಿಂದಿನ ಯುದ್ಧದಲ್ಲಿ ಅಮೇರಿಕಾದಲ್ಲಿ ಕ್ಷಯರೋಗದಲ್ಲಿ ಸಾಯುತ್ತಿದ್ದವರ ಸಂಖ್ಯೆ ತೀರಾದ 10 ಕ್ಕೆ ಹೆಚ್ಚಿತು. ಈಗ ಅದು 8 ಕ್ಕೆ ಇಳಿಯುತು. ಅಮೇರಿಕಾದವರು ಇದಕ್ಕಾಗಿ ಹೆಚ್ಚು ಶ್ರಮವಹಿಸಿ ಆಹಾರದ ವ್ಯವಸ್ಥೆಯನ್ನು ಅನುಕೂಲಪಡಿಸಿರುವರು.

ಅಮೇರಿಕ ಸರಕಾರವು 1945 ರಲ್ಲಿ ನೌಕೆ ಮತ್ತು ವಿಮಾನ ತಯಾರಿಕೆಗಾಗಿ 8000 ಮಿಲಿಯ ಡಾಲರ ವ್ಯಯಮಾಡಲು ಅಂದಾಜಾಗಿದೆ.

" ಲಿಗ್ನೈಟ್ " ಕಾಗದ ತಯಾರಿಯಲ್ಲಿ ಸಿಗುವ ಉಪ ಪದಾರ್ಥ. ಇದನ್ನು ಯಾರೂ ಉಪಯೋಗಿಸುತ್ತಿರಲಿಲ್ಲ ಇದನ್ನು ಈಗ ಕೆನಡಾದಲ್ಲಿ ರಸ್ತೆಗಳಿಗೆ ಉಪಯೋಗಿಸುತ್ತಿರುವರು. ಇದನ್ನು ಜಲ್ಲಿಯುಲ್ಲಿ ಸೇರಿಸಿದರೆ ನೆಲವು ಗಟ್ಟಿಯಾಗುವುದು.

ವೈಸರಾಯಿ ದಂಪತಿಗಳು

ವೈಸರಾಯಿ ದಂಪತಿಗಳು ತಮ್ಮ ಪರಿವಾರ ಸಮೇತ ಮೊನ್ನೆ ಸಾಯಂಕಾಲ ದೆಹಲಿಯಿಂದ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿದರು ವಿಮಾನ ನಿಲ್ದಾಣದಲ್ಲಿ ಬ್ರಿಟಿಷ್ ರೆಸಿಡೆಂಟರೂ ದಿವಾನರೂ ಆದಿಯಾಗಿ ಅನೇಕರು ವೈಸರಾಯಿ ದಂಪತಿಗಳನ್ನು ಸ್ವಾಗತಿಸಿದರು.

ಲೇಡಿ ವೇವಲ್ಲರು ನೊಬೆಲ್ ಕ್ಯಾಂಟೀನ್, ಬ್ಲೈತ್ ಕ್ಯಾಂಟೀನ್, ಲಾಲ್‌ಬಾಗ್ ಪುಷ್ಪ ಪ್ರದರ್ಶನ, ಸಿಟಿಯಲ್ಲಿರುವ ಭಾರತದಲ್ಲಿ ದೊಡ್ಡದಾದ 10026 ಜನ ರೋಗಿಗಳಿಗೆ ಅವಕಾಶವಿರುವ ಆಸ್ಪತ್ರೆ, ವಿಲಿಟರಿ ಕಮಿಟಿಯು ಏರ್ಪಡಿಸಿದ್ದ 'ಕ್ಯಾಸ್ ಟೆಂಟ್,' ಇವಕ್ಕೆಲ್ಲಾ ಭೇಟಿಕೊಟ್ಟರು. ವೈಸರಾಯಿಯೂ ಕೆಲ ಕಡೆಗೆ ಭೇಟಿಕೊಟ್ಟಿದ್ದರು. ಬೆಂಗಳೂರು ವೃತ್ತಪತ್ರಿಕಾಪ್ರತಿನಿಧಿಗಳನ್ನು ಪರಿಚಯ ಮಾಡಿಕೊಂಡರು.

ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

ಉಬ್ಬಸಕ್ಕೆ ಚಿಕಿತ್ಸೆ

ಚಿತ್ರಕೂಟ್ ಉಬ್ಬಸ ನಿವಾರಣೆ ಮಾಡಲು ಅತಾಥಾಶಣ ಶಕ್ತಿಯುಳ್ಳ ಸಿದ್ಧ ಮಹಾತ್ಮರಿಂದ ದೊರೆತಿರುವ ಮೂಲಿಕೆ. ತಾ || 26-2-45 ರಲ್ಲಿ ಸೇವಿಸಬೇಕು. ಒಂದು ಹೊತ್ತಿನ ಸೇವನೆಯಿಂದ ದ ಉಬ್ಬಸ ನಿವಾರಣೆಯಾಗುವುದು. ಕ್ರಯ ರೂ. 3-6-0.

Manager D. D. Sharma
Sant Sewa Ashrama
Ch.trakut Post (U.P.)

1945
ಪಾಕೆಟ್ ಕ್ಯಾಲೆಂಡರ್
ಮತ್ತು
ಬಣ್ಣ ಚಿತ್ರಪಠಗಳ ವಾಲ್ ಕ್ಯಾಲೆಂಡರ್
ಬೇಕಾದರೆ
— ವಿವರಗಳಿಗೆ —
ಕಾಂತರಾಜ್ ಅಂಡ್ ಕೊ.
ಚಿನ್ನ ಬೆಳ್ಳಿ ಮತ್ತು ದೇಶೀಯ ಔಷಧಿ
ವ್ಯಾಪಾರಿಗಳು
ರವೆ ಸ್ಟ್ರೀಟ .... ಮೈಸೂರು

ನಾ ಜಿ ಜ ರಿ ತ್ರ ಪಾ ಠ

ಪ್ರಪಂಚದಲ್ಲಿ ಅತ್ಯಂತ ಪ್ರಾಮುಖ್ಯತೆಯಿಂದ ಮತ್ತು ಘನತೆಯಿಂದ ಜೀವಿಸುತ್ತಿರುವ ಮನುಷ್ಯರಾರು ?

— ಶಿರಗೆತಿಯುವರೆಲ್ಲಾ ಏಕ ಕಂಠದಿಂದ— ಫ್ಯೂರರ್.

ನಾವು ನಮ್ಮ ಫ್ಯೂರರಿಗೆ ಏನು ಮಾಡಬೇಕು ?

— ನಾವು ಅವನನ್ನು ಪ್ರೀತಿಸಬೇಕು ಮತ್ತು ಮರ್ಯಾದೆ ಮಾಡಬೇಕು.

ಯಾತಕ್ಕೆ ಪ್ರತಿಯೊಬ್ಬ ಜರ್ಮನ್ ಯುವತಿಯೂ ತನ್ನ ಮೊಣಕಾಲೂರಿ ಪ್ರತಿ ರಾತ್ರಿಯೂ ದೇವರನ್ನು ವಂದಿಸಬೇಕು ?

— ಫ್ಯೂರರ್‌ನನ್ನು ನಮಗೆ ದಯಪಾಲಿಸಿದ್ದಕ್ಕಾಗಿ.

ದೇವರು ನಮಗೆ ಫ್ಯೂರರ್‌ನನ್ನು ಯಾತಕ್ಕೆ ದಯಪಾಲಿಸಿದನು ?

— ನಮ್ಮ ಉದ್ಧಾರಕ್ಕೆ.

ಫ್ಯೂರರ್ ನಮ್ಮನ್ನು ಏಕೆ ಉದ್ಧಾರ ಮಾಡಿದನು ?

— ನಾವು ಹಾಳಾಗುತ್ತಿದ್ದದ್ದನ್ನು ನೋಡಿ.

ಇದಲ್ಲದೆ ಇನ್ನೇನು ಉಪಕಾರ ಮಾಡಿದನು ?

— ಜಾತಿ ಕೋಮು ಭಾವನೆ ತೊಲಗಿಸಿದನು.

ಇವಲ್ಲದೆ ಮತ್ತೇನು ಮಾಡಿರುವನು ?

— ಪ್ರಪಂಚಕ್ಕೆ ಈ ವೈಪರೀತ್ಯ ಇರದಂತೆ ಮಾಡಿದನು.

ಫ್ಯೂರರ್ ಎಂದರೇನು ?

— ಜರ್ಮನಿಯ ರಕ್ಷಕ.

ಫ್ಯೂರರ್ ನಮಗೆ ಏನು ಕೊಟ್ಟನು ?

— ಪ್ರಪಂಚದಲ್ಲಿರದ ಒಂದು ಬಲಾಢ್ಯ ಸೈನ್ಯ.

ಇನ್ನೇನು ?

— ಬಲವಾದ ವಿಮಾನ ಪಡೆ.

ಇದಕ್ಕೋಸ್ಕರ ನಾವು ಪ್ರತಿ ರಾತ್ರಿ ಏನು ಮಾಡಬೇಕು ?

— ದೇವರು ಫ್ಯೂರರನ್ನು ಸಂರಕ್ಷಿಸಲೆಂದು ಮೊರೆ ಇಡಬೇಕು.

ಇದಕ್ಕಿಂತ ಮತ್ತೇನು ಹೆಚ್ಚಾದ್ದನ್ನು ಅಪೇಕ್ಷಿಸುವಿರಿ ?

— ಫ್ಯೂರರನ್ನು ಕೈಹಿಡಿಯಬೇಕೆಂದು.

ಮೈಸೂರು ರಣಜಿತ್ ಟಾಕೀಸಿನಲ್ಲಿ 4 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್

ಚಾರ್ಲಿ

ಮುಂತಾದವರು ಪಾತ್ರವಹಿಸಿರುವರು

— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಪೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್

ದೇವಕನ್ಯ

ಹೊನ್ನಪ್ಪ ಭಾಗವತರ್, ಶ್ರೀ ಆರ್. ಜೀವರತ್ನಂ, ಟಿ. ಆರ್. ತಾಮಚಂದ್ರ

ಮುಂತಾದವರು ಪಾತ್ರವಹಿಸಿರುವರು.

ಪ್ರತಿ ದಿನ 3 ಆಟಗಳು

— ಶೀಘ್ರದಲ್ಲೇ ಬರುತ್ತದೆ. —

ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್

ಪಾತ್ರವಹಿಸಿರುವ

ತಹಸಿಲ್‌ದಾರ್

(ತೆಲುಗು ಚಿತ್ರ)

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಅಶ್ಚರ್ಯಕರವಾದಷ್ಟು ವಸ್ತ್ರಗಳಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ;

ಅದರ ಸ್ಪಷ್ಟಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 70-0-0
ಚಿನ್ನ ತೊಲ 1 ಕ್ಕೆ	49-0-0
ಬೆಳ್ಳಿ "	1-4-0

ಸತ್ಯವಾದಿ

— ವಾರದ ಸಂಚಿಕೆ —

ಪರಸ್ಥಳಕ್ಕೆ ವಾರ್ಷಿಕ ಚಂದಾ

ಅಂಚೆವೆಚ್ಚ ಸೇರಿ ರೂ. 1-12-0

Edited, Printed and published by M. S. Krishna Rao, at the Satyavadi Press, Chamaraja Agrahar, Mysore